ಇ) ಈ ಆಸ್ಪತ್ರೆಗಳ ವೈದ್ಯರ ಸೌಲಭ್ಯ ಹೆಚ್ಚಿಸಲು ಹಾಗೂ ಶುಚಿತ್ವ ಕಾಪಾಡಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು ? ---

ಡಾ: ಹೆಚ್.ಸಿ.ಮಹದೇವಪ್ಪ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು):-

ಅ) ಒಟ್ಟು 45 ದೊಡ್ಡ ಸಾರ್ವಜನಿಕ ಆಸ್ಪತ್ರೆಗಳು ಇರುತ್ತವೆ:

ಆ) ಒಟ್ಟು 37 ವೈದ್ಯರ ಹುದ್ದೆಗಳು ಖಾಲಿ ಇರುತ್ತವೆ.

ಇ) ಹಾಸಿಗೆ ಸಂಖ್ಯೆಗನುಗುಣವಾಗಿ ನಾರ್ಮ್ಸ್ ಪ್ರಕಾರ ವೈದ್ಯರ ಹುದ್ದೆಗಳನ್ನು ಮತ್ತು ಸಿಬ್ಬಂದಿಯನ್ನು ಮಂಜೂರು ಮಾಡಲು ಹಂತ ಹಂತವಾಗಿ ಕ್ರಮ ಕೈಗೊಳ್ಳಲಾಗುವುದು. ಆಸ್ಪತ್ರೆಯ ಶುಚಿತ್ವ ಕಾಪಾಡುವ ಬಗ್ಗೆ ಆಸ್ಪತ್ರೆಯ ಮುಖ್ಯಸ್ಥರಿಗೆ ಆಗಾಗ್ಗೆ ಸುತ್ತೋಲೆ ಮೂಲಕ ಸೂಚನೆ ನೀಡಲಾಗಿದೆ. ಹಾಗೂ ಕಾಲಿಕ ಮತ್ತು ಅನಿರೀಕ್ಷಿತ ಭೇಟಿ ನೀಡಿ ಪರಿವೀಕ್ಷಣೆ ನಡೆಸಲಾಗುತ್ತಿದೆ. ಆಸ್ಪತ್ರೆಯ ಶುಚಿತ್ವ ಕಾರ್ಯನಿರ್ವಹಣೆಗೆ ಖಾಸಗಿಯವರಿಗೆ ಗುತ್ತಿಗೆ ನೀಡುವ ವಿಚಾರ ಸರ್ಕಾರದ ಗಮನದಲ್ಲಿದೆ.

ವಿಷಯ :- ಹಂಪಿ ಕನ್ನಡ ವಿಶ್ವವಿದ್ಯಾಲಯದಲ್ಲಿಯ ನೇಮಕಾತಿಗಳು

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ :- 92(580)

ಶ್ರೀ ಜಿ.ಶಂಕರಗೌಡ (ಹೊಸಪೇಟೆ) :- ಮಾನ್ಯ ಉನ್ನತ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಹಂಪಿಯ ಕನ್ನಡ ವಿಶ್ವವಿದ್ಯಾಲಯದಲ್ಲಿ ಪ್ರಾರಂಭದಿಂದ ಇಲ್ಲಿಯವರೆಗೆ ವಿವಿಧ ಹುದ್ದೆಗಳಿಗೆ ನೇಮಕಾತಿಯಾಗಿರುವ ಒಟ್ಟು ಸಂಖ್ಯೆ ಎಷ್ಟು (ವರ್ಗವಾರು ವಿವರ ನೀಡುವುದು):

ಆ) ಇದರಲ್ಲಿ, ಕಾನೂನು ರೀತಿ ಅರ್ಹರಲ್ಲದವರನ್ನು ಹಾಗೂ ಸ್ಥಳೀಯರಲ್ಲದವರನ್ನು ನೇಮಕ ಮಾಡಿಕೊಂಡಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ?

ಇ) ಹಾಗಿದ್ದಲ್ಲಿ, ಅರ್ಹರಲ್ಲದವರು ಹಾಗೂ ಸ್ಥಳೀಯರು ಮತ್ತು ಸ್ಥಳೀಯರಲ್ಲದವರ ವಿವರ ನೀಡುವುದು (ಹೊಸಪೇಟೆ ತಾಲ್ಲೂಕು ಹಾಗೂ ಬಳ್ಳಾರಿ ಜಿಲ್ಲೆಯವರ ವಿವರ ನೀಡುವುದು)

ಈ) ಇನ್ನು ಮುಂದು ನೇಮಕಾತಿ ಮಾಡುವಾಗ ನೇಮಕಾತಿ ಸಮಿತಿ ಮಾಡಲು

ಸರ್ಕಾರದವರು ಪರಶೀಲಿಸುವರೇ? -----

ಶ್ರೀ ಡಿ.ಮಂಜುನಾಥ್ (ಉನ್ನತ ಶಿಕ್ಷಣ ಸಚಿವರು) :-

ಅ) ಒಟ್ಟು 116 ಜನರನ್ನು ನೇಮಿಸಲಾಗಿದೆ. ವಿವರಗಳನ್ನು ಲಗತ್ತಿಸಲಾಗಿದೆ.

ಇ) ಅರ್ಹರಲ್ಲದವರು ಯಾರೂ ಇಲ್ಲ. ಸ್ಥಳೀಯರ ಮತ್ತು ಸ್ಥಳೀಯರಲ್ಲದವರ ವಿವರ ಲಗತ್ತಿಸಲಾಗಿದೆ.

ಈ) 1991ರ ಕನ್ನಡ ವಿಶ್ವವಿದ್ಯಾಲಯದ ಅಧಿನಿಯಮದ ಪ್ರಕಾರ ಬೋಧಕ ಮತ್ತು ಬೋಧಕೇತರ ಹುದ್ದೆಗಳಿಗೆ ಆಯ್ಕೆ ಮಾಡಲು ನೇಮಕಾತಿ ಮಂಡಳಿಗಳು ಇವೆ.

ಲ ಗ ತ್ತು - 1

ಬೋಧಕ

1. ಪ್ರಾಧ್ಯಾಪಕರು	-	04
2. ಪ್ರವಾಚಕರು	-	04
3. ಉಪನ್ಯಾಸಕರು	-	19

ಬೋಧಕೇತರ

1. ಮುಖ್ಯ ಗ್ರಂಥಪಾಲಕರು	-	01
2. ನಿರ್ದೇಶಕರು, ಪ್ರಸಾರಾಂಗ	-	01
3. ನಿದೇಶಕರು, ಸಮಾಚಾರ ಮಾಹಿತಿ ಕೇಂದ್ರ	-	01
4. ಸಹಾಯಕ ಅಭಿಯಂತರು	-	01
5. ಸಹಾಯಕ ನಿರ್ದೇಶಕರು, ಪ್ರಸಾರಾಂಗ	-	03
6. ಸಹಾಯಕ ಗ್ರಂಥಪಾಲಕರು	-	01
7. ವಿನ್ಯಾಸಕಾರ	-	01
8. ಗ್ರಂಥಾಲಯ ತಾಂತ್ರಿಕ ಸಹಾಯಕರು	-	01
9. ಕಂಪ್ಯೂಟರ್ ಆಪರೇಟರ್	-	01
10. ಕಿರಿಯ ಅಭಿಯಂತರು	-	01
11. ಯೋಜನಾ ಸಹಾಯಕರು	-	01
12. ಶೀಘ್ರಲಿಪಿಗಾರರು	-	01

13. ಕ್ಯಾಮರಾಮನ್	-	01
14. ಗ್ರಂಥಾಲಯ ಸಹಾಯಕರು	-	02
15. ವಾಹನ ಚಾಲಕರು	-	04
16. ಕಿರಿಯ ಸಹಾಯಕರು	-	17
17. ತಾಂತ್ರಿಕ ಸಹಾಯಕ, ದೃಶ್ಯಕಲಾ ವಿಭಾಗ	-	01
18. ಬೆರಳಚ್ಚುಗಾರರು	-	04
19. ಅನುಚರರು	-	01
20. ಜವಾನರು	-	03
21. ಕಾವಲುಗಾರರು	-	10
22. ಕಸಗುಡಿಸುವವರು	-	05
23. ಪ್ಯಾಕರ್	-	01
24. ಮಾಲಿಗಳು	-	02
25. ಕ್ರೋಡೀಕೃತ ವೇತನದವರು	-	08
26. ದಿನಗೂಲಿಯವರು	-	16
ಒಟ್ಟು	-	116

ಲಗತ್ತು - 2

01. ಅರ್ಹರಲ್ಲದವರು ಯಾರು ಇಲ್ಲ.

02. ಸ್ಥಳೀಯರು ಮತ್ತು ಸ್ಥಳೀಯರಲ್ಲದವರ ವಿವರ ಈ ಕೆಳಕಂಡಂತಿರುತ್ತದೆ.

ಕ್ರಮ ಸಂಖ್ಯೆ	ಜಿಲ್ಲೆಗಳ ಹೆಸರು	ಜಿಲ್ಲಾವಾರು ನೇಮಕಾತಿ ಸಂಖ್ಯೆ
1.	ಬೆಂಗಳೂರು ನಗರ ಮತ್ತು	ಒಂಬತ್ತು
2.	ಬೆಂಗಳೂರು ಗ್ರಾಮಾಂತರ	
3.	ಮೈಸೂರು	ಎಂಟು
4.	ಕೋಲಾರ	ಎರಡು

5.	ಮಂಡ್ಯ	--
6.	ತುಮಕೂರು	ನಾಲ್ಕು
7.	ಕೊಡಗು	--
8.	ಚಿತ್ರದುರ್ಗ	ಮೂರು
9.	ದಕ್ಷಿಣ ಕನ್ನಡ	ಆರು
10.	ಚಿಕ್ಕಮಗಳೂರು	--
11.	ಶಿವಮೊಗ್ಗ	ಹತ್ತು
12.	ಹಾಸನ	ಒಂದು
13.	ಬೆಳಗಾವಿ	ಎರಡು
14.	ಧಾರವಾಡ	ಎಂಟು
15.	ರಾಯಚೂರು	ನಾಲ್ಕು
16.	ಬಳ್ಳಾರಿ (ಬಳ್ಳಾರಿ:13) (ಹೊಸಪೇಟೆ:39)	ಐವತ್ತೆರಡು
17.	ಗುಲ್ಬರ್ಗಾ	--
18.	ಬೀದರ್	ಒಂದು
19.	ವಿಜಾಪುರ	ನಾಲ್ಕು
20.	ಉತ್ತರ ಕನ್ನಡ	ಒಂದು

	ಒಟ್ಟು	ಒಂದು ನೂರ ಹದಿನಾರು